ಇ) ಈ ಪ್ರದೇಶ (ಸ್ಥಳಗಳಲ್ಲಿ) ಗಳಲ್ಲಿ ಜನರು ಅಕ್ರಮವಾಗಿ ಮನೆಗಳನ್ನು ನಿರ್ಮಿಸಿಕೊಂಡು ವಾಸ ಮಾಡುತ್ತಿರುವ ಈ ಜನರಿಗೆ ಸ್ಥಳದ ಹಕ್ಕು ಪತ್ರ ನೀಡಲು ಆರ್.ಟಿ.ಸಿ.ಯಲ್ಲಿನ ಕಾಡು ಅಥವಾ ಅರಣ್ಯ ಪದ ಕಾನೂನಿನ ತೊಡಕಾಗುವುದರಿಂದ, ಕಾಯಿದೆಗೆ ತಿದ್ದುಪಡಿ ತರಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಅರಣ್ಯ ಸಂರಕ್ಷಣೆ ಕಾಯ್ದೆಯು ಕೇಂದ್ರ ಸರ್ಕಾರದ ಕಾಯ್ದೆಯಾಗಿದ್ದು, ಇದಕ್ಕೆ ರಾಜ್ಯ ಸರ್ಕಾರವು ತಿದ್ದುಪಡಿ ತರಲು ಅವಕಾಶವಿಲ್ಲ.

238 ಶ್ರೀ. ಗೋಪಾಲಕೃಷ್ಣ ಬೇಳೂರು(ಸಾಗರ)
ಮಾನ್ಯ ಗೃಹ ಸಚಿವರು

ಅ ನಕ್ಸಲೈಟ್ ಹಾವಳಿ ಹೆಚ್ಚಾಗಿರುವ ಮತಕ್ಷೇತ್ರದ ಶಾಸಕರುಗಳಿಗೆ ಕೇವಲ ಒಬ್ಬ ಸಾಮಾನ್ಯ ಭದ್ರತಾ ಸಿಬ್ಬಂದಿ ನಿಯೋಜಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ನಕ್ಸಲೈಟ್ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಮಾನ್ಯ ಶಾಸಕರುಗಳನ್ನೊಳಗೊಂಡಂತೆ ಗಣ್ಯ ವ್ಯಕ್ತಿಗಳಿಗೆ ಅವರಿಗಿರುವ ಬೆದರಿಕೆಯ ಸ್ವರೂಪ ಹಾಗೂ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ರಾಜ್ಯ ಭದ್ರತಾ ವರ್ಗೀಕರಣ ಪುನರ್ ಪರಿಶೀಲನಾ ಸಮಿತಿಗಳು ವರ್ಗಿಕೃತ ಭದ್ರತೆ ಅಥವಾ ಅಂಗರಕ್ಷಕ ಭದ್ರತೆಯನ್ನು ಒದಗಿಸುವ ಬಗ್ಗೆ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳುತ್ತವೆ. ಈ ನಿರ್ಣಯದಂತೆ ಸಂಬಂಧಪಟ್ಟ ಜಿಲ್ಲೆಯಿಂದ ಸದರಿ ವ್ಯಕ್ತಿಗಳಿಗೆ ಬೆದರಿಕೆ ಸ್ವರೂಪದ ಆಧಾರದ ಮೇಲೆ ಭದ್ರತೆಯನ್ನು ಒದಗಿಸಲಾಗುತ್ತಿದೆ.

ಅಗತ್ಯಕ್ಕೆ ಅನುಸಾರವಾಗಿ ನಕ್ಸಲ್ ಚಟುವಟಿಕೆ ಹೆಚ್ಚಿರುವ ಪ್ರದೇಶಗಳಲ್ಲಿ ಇನ್ನು ಹೆಚ್ಚಿನ ಭದ್ರತೆಯನ್ನು ಮಾನ್ಯ ಶಾಸಕರಿಗೆ ಒದಗಿಸಲು ಕ್ರಮಕೈಗೊಳ್ಳುವಂತೆ ಸಂಬಂಧಿಸಿದವರಿಗೆ ಸೂಚಿಸಲಾಗಿದೆ.

ಭದ್ರತಾ ಸಿಬ್ಬಂದಿಯನ್ನು ಸಾಮಾನ್ಯವಾಗಿ ಸಂಬಂಧಪಟ್ಟ ಜಿಲ್ಲಾ ಡಿ.ಎ.ಆರ್. ಘಟಕದಿಂದ ನಿಯೋಜಿಸಲಾಗಿದ್ದು, ಈ ಸಿಬ್ಬಂದಿ ಡಿ.ಎ.ಆರ್.ನಲ್ಲಿ ಶಸ್ತ್ರಭ್ಯಾಸ/ಗುರಿ ತರಬೇತಿಯನ್ನು ಹೊಂದಿರುತ್ತಾರೆ. ನಕ್ಸಲ್ ಚಟುವಟಿಕೆ ಇರುವ ಜಿಲ್ಲೆಗಳಲ್ಲಿ ಇನ್ನು ಹೆಚ್ಚಿನ ರೀತಿಯಲ್ಲಿ ಸಿಬ್ಬಂದಿಗೆ ತರಬೇತಿಯನ್ನು ನೀಡಲಾಗಿದೆ.

ಆ ಬಂದಿದ್ದಲ್ಲಿ, ಇತ್ತೀಚಿನ ದಿನಗಳಲ್ಲಿ ನಕ್ಸಲೈಟ್ಸ್ ಹಾವಳಿ ಹೆಚ್ಚಾಗಿರುವುದರಿಂದ ವಿಶೇಷ ತರಬೇತಿ ಹೊಂದಿರುವ ಭದ್ರತಾ ಸಿಬ್ಬಂದಿಗಳನ್ನು ನಿಯೋಜಿಸಲು ಸರ್ಕಾರ ಯೋಚಿಸಿದೆಯೇ?

ನಕ್ಸಲ್ ಪೀಡಿತ ಪ್ರದೇಶಗಳನ್ನೊಳಗೊಡಂತೆ ಭದ್ರತಾ ಸಿಬ್ಬಂದಿಗಳಿಗೆ ಆಗಿಂದಾಗ್ಗೆ ವಿಶೇಷ ಪುನರ್‌ಮನನ ತರಬೇತಿಯನ್ನು ನೀಡಲು ಪೊಲೀಸ್ ಇಲಾಖೆಯು ಕ್ರಮಕೈಗೊಳ್ಳುತ್ತದೆ. ಪುನಶ್ಚೇತನ ಪಠ್ಯಕ್ರಮಗಳನ್ನು (Refresher Courses) ನಕ್ಸಲ್ ನಿಗ್ರಹ ಬಲದ ಸಿಬ್ಬಂದಿರವರಿಗೆ ನೀಡಲಾಗುತ್ತಿದೆ. ಬೆಂಗಳೂರಿನ

ಕೋರಮಂಗಲದಲ್ಲಿರುವ ಕರ್ನಾಟಕ ರಾಜ್ಯ ಮೀಸಲು ಪೊಲೀಸ್‌ನ 4ನೇ ಪಡೆಯಲ್ಲಿ ನಕ್ಸಲ್ ನಿಗ್ರಹ ಬಲದ ಮೂಲ ತರಬೇತಿಯನ್ನು ನೀಡಲಾಗುತ್ತಿದೆ. ಆಯುಧ ತರಬೇತಿ ತಂತ್ರಗಳನ್ನು, Map Reading, Night Navigation ನಂತಹ ವಿಷಯಗಳಲ್ಲಿ ಅತ್ಯುತ್ತಮ ತರಬೇತಿ ನೀಡಲಾಗುತ್ತಿದೆ.

63 ಶ್ರೀ. ಪಾಟೀಲ್ ಎ.ಎಸ್.

ಮಾನ್ಯ ಗೃಹ ಸಚಿವರು

1. ದೇವರ ಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಪೊಲೀಸ್ ಠಾಣೆಗಳು ಕಾರ್ಯ ನಿರ್ವಹಿಸುತ್ತಿವೆ.

ದೇವರಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯಲ್ಲಿ 5 ಪೊಲೀಸ್ ಠಾಣೆಗಳು ಕಾರ್ಯ ನಿರ್ವಹಿಸುತ್ತಿವೆ.

1. ದೇವರಹಿಪ್ಪರಗಿ ಪೊಲೀಸ್ ಠಾಣೆ,
2. ಕಲಕೇರಿ ಪೊಲೀಸ್ ಠಾಣೆ,
3. ತಾಳಿಕೋಟೆ ಪೊಲೀಸ್ ಠಾಣೆ,
4. ಬಸವನಬಾಗೇವಾಡಿ ಪೊಲೀಸ್ ಠಾಣೆ,
5. ಕೋಲ್ಹಾರ ಪೊಲೀಸ್ ಠಾಣೆ

2. ಯಾವ ಯಾವ ಗ್ರಾಮಗಳು ಯಾವ ಪೊಲೀಸ್ ಠಾಣೆ ವ್ಯಾಪ್ತಿಗೆ ಬರುತ್ತವೆ.

ಅನುಬಂಧದಲ್ಲಿ ನೀಡಿದೆ.

ಸರ್ಕಾರದ ಪರಿಶೀಲನೆಯಲ್ಲಿದೆ.

3. ಸದರಿ ಕ್ಷೇತ್ರದಲ್ಲಿ ಹೂವಿನ ಹಿಪ್ಪರಗಿಗೆ ಹೊಸದಾಗಿ ಪೊಲೀಸ್ ಠಾಣೆ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

4. ಹಾಗಿಲ್ಲದಿದ್ದಲ್ಲಿ ಕಾರಣಗಳೇನು;

ಅನುಬಂಧ

1.<u>ದೇವರಹಿಪ್ಪರಗಿ ಪೊಲೀಸ್ ಠಾಣೆ:-</u>	14. ಬನ್ನಿಹಟ್ಟಿ ಪಿ.ಟಿ.	6. ಅರಸ್ನಾಳ್
1. ದೇವರಹಿಪ್ಪರಗಿ	15. ಬೇಕಿನಾಳ್	7. ಬೈಕೋಡ್
2.ದೇವರಹಿಪ್ಪರಗಿ ಎಲ್.ಟಿ	16. ನವಕಿಹಾಳ್	8. ನಡ್ಯಾಳ್ ಪಿ.ಹಚ್.
3. ಪದಗನೂರು	17. ಅಲಗೂರ್	9. ಸಿಂದಗೇರಿ
4. ಬಮ್ಮನಜೋಗಿ	18. ತುರ್ಕನಗೇರಿ	10. ಸೋಮನಾಳ್
5. ಶಾಂತಿನಗರ	19. ಹುನಶ್ಯಾಳ್	11. ಚಬನೂರ್